**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1050/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಚಿದಾನಂದ್ ಹೆಚ್. | ಪ್ರಾಸಾ-3 |
| ತಂದೆಯ ಹೆಸರು | : ಹೊರಕೇರಪ್ಪ ಹೆಚ್.ಆರ್. | ಚಾಸಾ-4 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : DRFO | ದಿನಾಂಕಃ31.07.2024. |
| ವಾಸಸ್ಥಳ | : ಆಲ್ದೂರು. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು 2016 ರಿಂದ 2021 ರವರೆಗೂ ಮೂಡಿಗೆರೆ ವಿಭಾಗದ DRFO ಆಗಿ ಕರ್ತವ್ಯ ನಿರ್ವಹಿಸುವಾಗ ದೇವವೃಂದ ಶಾಖೆಯ DRFO ಪ್ರಭಾರ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.17.02.2019 ರಂದು ಚಾಸಾ-5 ರವರು ಚಾಸಾ-1 ರವರಿಗೆ ಪತ್ರ ನೀಡಿ ಪ್ರಾಣಿಗಳ ಅಂಗಾಂಗ ಮಾರಾಟ ಆಗುತ್ತಿರುವ ಬಗ್ಗೆ ತಿಳಿಸಿ ಜಂಟಿ ಕಾರ್ಯಚರಣೆ ಮಾಡುವ ಪ್ರಕಾರ ಚಾಸಾ-1 ರವರು ನಮಗೆ ಮಾಹಿತಿ ತಿಳಿಸಿ ನಮ್ಮನ್ನು ಚಾಸಾ-5 ರವರೊಂದಿಗೆ ಕಳುಹಿಸಿಕೊಟ್ಟಿರುತ್ತಾರೆ. ಆ ದಿನ ರಾತ್ರಿ ಸುಮಾರು 9.30 ಕ್ಕೆ ಇಲಾಖಾ ವಾಹನದಲ್ಲಿ ಹೊರಟು ಕಿತ್ಲೆಗಂಡಿಯ ಬಳಿ ಹೇಮಾವತಿ ನದಿಯ ಸೇತುವೆ ಹತ್ತಿರ ವಾಹನ ನಿಲ್ಲಿಸಿಕೊಂಡು ಕಾಯುತ್ತಿರುವಾಗ ನಾವು ಸ್ವ ತಪಾಸಣಾ ವರದಿಯನ್ನು ತಯಾರಿಸಿಕೊಂಡಿರುತ್ತೇವೆ. ಆನಂತರ ಆ ಸ್ಥಳದಿಂದ ಕಾಲ್ನಡಿಗೆಯಲ್ಲಿ 150 ಮೀಟರ್ ದೂರದಲ್ಲಿ ಇದ್ದ ಬಸ್ ಸ್ಟ್ಯಾಂಡ್ ಬಳಿ ಹೋಗಿ ನೋಡಿದಾಗ 4-5 ಜನ ಇದ್ದು ಚಾಸಾ-5 ರವರ ಆದೇಶದಂತೆ ನಾವು ಅಲ್ಲಿದ್ದ ವ್ಯಕ್ತಿಗಳನ್ನು ಹಿಡಿದುಕೊಂಡಿರುತ್ತೇವೆ. ಬಸ್ ಸ್ಟಾಂಡ್ ಮುಂದೆ ಒಂದು ಸ್ಕೂಟಿ ನಿಂತಿದ್ದು ಅದರ ನೋಂದಣಿ ಸಂ.KA-EE-2516 ಆಗಿದ್ದು ಆ ಸ್ಕೂಟಿಯ ಮಧ್ಯಭಾಗದಲ್ಲಿ ಒಂದು ಪ್ಲಾಸ್ಟಿಕ್ ಚೀಲ ಹಾಗೂಅದರಲ್ಲಿ ಕಡವೆಯ ಕೊಂಬುಗಳು ಇರುವುದು ಕಂಡುಬಂತು. ಅವುಗಳ ಬಗ್ಗೆ ಆರೋಪಿತರಲ್ಲಿ ಕೇಳಿದಾಗ ಕೊಂಬುಗಳನ್ನು ಮಾರಾಟ ಮಾಡಲು ತಂದಿದ್ದು ಯಾರೋ ಒಬ್ಬರು ಖರೀದಿದಾರರು ಬರುತ್ತಿದ್ದಾರೆ ಎಂದು ಹೇಳಿದರು.

ಆನಂತರ ಆರೋಪಿತರನ್ನು ನಿಯಮಾನುಸಾರ ದಸ್ತಗಿರಿ ಮಾಡಿ ಅವರ ವಶದಲ್ಲಿ ಸಿಕ್ಕ ಕಡವೆ ಕೊಂಬುಗಳನ್ನು ವಶಕ್ಕೆ ಪಡೆದು ರಾ.10.15 ರಿಂದ 11.30 ರವರೆಗೂ ಮಹಜರ್ ಕ್ರಮ ಜರುಗಿಸುವ ಮೂಲಕ ಅವುಗಳನ್ನು ವಶಕ್ಕೆ ಪಡೆಯಲಾಗಿದೆ. ಆನಂತರ ಆರೋಪಿತರು ಹಾಗೂ ವಶಕ್ಕೆ ಪಡೆದ ಮಾಲನ್ನು ಚಾಸಾ-1 ರವರ ಕಚೇರಿಗೆ ತಂದು ಅವರ ಸಮಕ್ಷಮ ಹಾಜರುಪಡಿಸಿದೆವು. ದಿ.18.02.2019 ರಂದು ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಚಿಕ್ಕಮಗಳೂರು ಕಾರಗೃಹಕ್ಕೆ ಬಿಟ್ಟುಬಂದಿರುತ್ತೇವೆ. ದಿ.19.02.2019 ರಂದು ಚಾಸಾ-2 ರವರು ಶೋಧನಾ ವಾರೆಂಟ್ ನೀಡಿ ಆರೋಪಿತರ ಮನೆ ಜಪ್ತು ಮಾಡುವಂತೆ ಆದೇಶಿಸಿದ್ದು ಆ ದಿನ ನಮ್ಮೊಂದಿಗೆ ಚಾಸಾ-11 ರವರು ಇದ್ದರು. ಆ ದಿನ ಮದ್ಯಾಹ್ನ 1.15 ರ ಸಮಯಕ್ಕೆ 1 ನೇ ಆರೋಪಿಯ ಮನೆಯ ಬಳಿ ಹೋಗಿ ನೋಡಿದಾಗ ಮನೆಯ ಬೀಗ ಹಾಕಿದ್ದು, ಚಾಸಾ-12

ಮತ್ತು 1 ನೇ ಆರೋಪಿಯ ತಾಯಿ ಸಮಕ್ಷಮ ಬೀಗ ತಗಿಸಿ ಮನೆಯನ್ನು ಶೋಧನೆ ಮಾಡಿದಾಗ ಮನೆಯ ಹಟ್ಟದ ಮೇಲೆ ಕಡವೆ ಕೊಂಬುಗಳು, ಒಂದು ಕಾಡು ಕುರಿಯ ಕೊಂಬು, ಬಳಸಿದ 12 ಕಾಟ್ರಿಡ್ಜಗಳು ಇದ್ದವು. ಸದರಿ ವಸ್ತುಗಳನ್ನು ಮದ್ಯಾಹ್ನ 1.15 ರಿಂದ 2.00 ರವರೆಗೂ ಮಹಜರ್ ಕ್ರಮ ಜರುಗಿಸಿ ವಶಕ್ಕೆ ಪಡೆದಿದ್ದೇವೆ. ಉಳಿದ ಆರೋಪಿತರ ಮನೆಯಲ್ಲಿ ಶೋಧನೆ ಮಾಡಿದಾಗ ಏನೂ ಸಿಕ್ಕಿರುವುದಿಲ್ಲ. ಮಹಜರ್ ಕಾಲಕ್ಕೆ ನಮ್ಮ ಇಲಾಖಾ ಸಿಬ್ಬಂದಿಯವರು ಫೋಟೋಗಳನ್ನು ತೆಗೆದಿದ್ದು ಆ ಫೋಟೋಗಳನ್ನು ನಾನು ಸಿಡಿಗೆ ಅಳವಡಿಸಿ ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ದೃಢೀಕರಣ ಪತ್ರ ನೀಡಿರುತ್ತೇನೆ.

ಸಾಕ್ಷಿಯು ಸ್ವ ಶೋಧನಾ ಮಹಜರ್, ದಿ.17.02.2019 ರ ಮಹಜರ್, ದಿ.19.02.2019 ರ ಸ್ಥಳ ತನಿಖಾ ಮಹಜರ್, ಅಮಾನತ್ತು ಮಹಜರ್, ಕಚ್ಚಾ ನಕಾಶೆ, ಮ್ಯಾಪ್ ಗಳು, ಐದು ಫೋಟೋಗಳು ಸಿಡಿ ಮತ್ತು ದೃಢಿಕರಣ ಪತ್ರವನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ 14, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 7(ಎ) ಮತ್ತು 14(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಟ್ಟು 4 ಕಡವೆ ಕೊಂಬುಗಳ ಪೈಕಿ 2 ಕೊಂಬುಗಳನ್ನು ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಮತ್ತೆರಡು ಕೊಂಬುಗಳನ್ನು 1 ನೇ ಆರೋಪಿಯ ಮನೆಯಲ್ಲಿ ವಶಕ್ಕೆ ಪಡೆದುಕೊಂಡ ಬಗ್ಗೆ ಮತ್ತು ಕಾಡು ಕುರಿಯ ಕೊಂಬು ಮತ್ತು 12 ಉಪಯೋಗಿಸಿದ ಕಾಟ್ರಿಡ್ಜ್ ಗಳನ್ನು 1 ನೇ ಆರೋಪಿಯ ಮನೆಯಲ್ಲಿ ವಶಕ್ಕೆ ಪಡೆದುಕೊಂಡ ಬಗ್ಗೆ ಗುರುತಿಸುತ್ತಾರೆ. ಸ್ಥಳದಲ್ಲಿ ವಶಕ್ಕೆ ಪಡೆದುಕೊಳ್ಳಲಾಯಿತು ಎಂದು ಹೇಳಲಾಗಿರುವ ಕೊಂಬುಗಳನ್ನು ಎಂ.ಒ.1 ಮತ್ತು 2, 1 ನೇ ಆರೋಪಿಯ ಮನೆಯಲ್ಲಿ ವಶಕ್ಕೆ ಪಡೆಯಲಾಗಿದೆ ಎಂದು ಹೇಳಲಾಗಿರುವ ಕಡವೆ ಕೊಂಬುಗಳನ್ನು ಎಂ.ಒ.3 ಮತ್ತು 4, ಕಾಡುಕುರಿಯ ಕೊಂಬನ್ನು ಎಂ.ಒ.5, ಕಾಟ್ರಿಡ್ಜ್ ಗಳನ್ನು ಒಟ್ಟಾಗಿ ಎಂ.ಒ.6 ಎಂದು ಗುರುತಿಸಲಾಯಿತು. ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ.

<u>**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದಃ**</u>

ನಮಗೆ ಮಾಹಿತಿ ಬಂದ ದಿನಾಂಕ ವಾರದ ಯಾವ ದಿನ ಎಂದು ಹೇಳಲು ಆಗುವುದಿಲ್ಲ. ಆ ದಿನ ನಾನು ಕರ್ತವ್ಯದಲ್ಲಿ ಇದ್ದೆ ಎಂದು ತೋರಿಸಲು ತನಿಖಾಧಿಕಾರಿಯ ಮುಂದೆ ದಾಖಲೆ ಹಾಜರುಪಡಿಸಿಲ್ಲ. ಕಾರಣಾಂತರಗಳಿಂದ ಕಾಡುಪ್ರಾಣಿಗಳ ಕೊಂಬು ಬಿದ್ದುಹೋಗುತ್ತದೆ ಎಂದರೆ ಸರಿ. ಆ ರೀತಿ ಸಿಗುವ ಕೊಂಬುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕಚೇರಿಗೆ ತರುತ್ತಾರೆ ಎಂದರೆ ಸರಿ. ಯಾವುದಾದರೂ ವಸ್ತುಗಳನ್ನು ವಶಕ್ಕೆ ಪಡೆದರೆ ಅದರ ಮೇಲೆ FOC ಸಂಖ್ಯೆ ಮತ್ತು ದಿನಾಂಕ ನಮೂದು ಮಾಡಲಾಗುತ್ತದೆ ಎಂದರೆ ಸರಿ. ನಾನು ಗುರುತಿಸಿರುವ ವಸ್ತುಗಳ ಮೇಲೆ FOC ಸಂಖ್ಯೆಗಳನ್ನು ಬರೆಯಲಾಗಿದೆ. ಆ ರೀತಿ ಕೆಂಪು ಬಣ್ಣದಿಂದ ಬರೆಯಲಾಗಿದೆ. ಎಂ.ಒ.1 ರಿಂದ 4 ರ ಮೇಲೆ FOC ಸಂಖ್ಯೆ ಬರೆಯಬಹುದಾದ

ಸಮತಟ್ಟಾದ ಜಾಗ ಇದೆ ಎಂದರೆ ಸರಿ. ಎಂ.ಓ.1 ರಿಂದ 5 ರ ಮೇಲೆ FOC ಸಂಖ್ಯೆ ಕಾಣುತ್ತಿಲ್ಲ ಎಂದರೆ ಸರಿ. ವಶಕ್ಕೆ ಪಡೆಯಲಾದ ವಸ್ತುಗಳ ಮೇಲೆ ಪಂಚರುದಾರರ ಸಹಿಯುಳ್ಳ ಚೀಟಿ ಅಂಟಿಸಲಾಗುತ್ತದೆ ಎಂದರೆ ಸರಿ. ಎಂ.ಓ.1 ರಿಂದ 5 ರ ಮೇಲೆ ಆ ರೀತಿ ಯಾವುದೇ ಚೀಟಿ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಈಗ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ನಮಗೆ ಸಿಕ್ಕ ವಸ್ತುಗಳು ಹಳೇಯ ವಸ್ತುಳಾಗಿದ್ದವು. ಎಂ.ಓ.1 ರಿಂದ 4 ರ ಕೊಂಬುಗಳ ಪೈಕಿ ಒಂದು ಕೊಂಬು ಹೊಸದಾಗಿ ಬಿದ್ದಿದೆ ಎಂದರೆ ಸರಿಯಲ್ಲ.

ನಾನು 1 ನೇ ಆರೋಪಿಯ ಮನೆಯ ಒಳಗೆಲ್ಲ ಹುಡುಕಾಡಿದ್ದೆ. ಮನೆಯ ಒಳಗೆ ಶೋಧನೆ ಮಾಡುವ ಮೊದಲು ಮನೆಯ ಹೊರಗೆ ಅಂಗ ಶೋಧನೆ ಮಾಡಿಕೊಳ್ಳಬೇಕು ಹಾಗೂ ಆ ಸಂಬಂಧ ಮಹಜರ್ ಬರೆಯಬೇಕು ಎಂದರೆ ಸರಿ. ಆ ರೀತಿ ಅಂಗಶೋಧನೆ ಮಾಡಿಕೊಂಡು ಬಗ್ಗೆ ದಾಖಲೆಯನ್ನು ಈ ದಿನ ನೋಡಿಲ್ಲ. ಎಂ.ಓ.6 ರಂತಹ ವಸ್ತುಗಳನ್ನು ಯಾರಾದರೂ ತೆಗೆದುಕೊಂಡು ಹೋಗಿ ಇಡಬಹುದು ಎಂಬ ಉದ್ದೇಶದಿಂದ ಅಂಗಶೋಧನೆ ಮಾಡಿಕೊಳ್ಳಬೇಕು ಎಂದರೆ ಸರಿ. ನಿಪಿ-8 ರಿಂದ 12 ರ ಫೋಟೋಗಳಲ್ಲಿ ಕಾಣುವ ವಸ್ತುಗಳ ಮೇಲೆಯೂ ಸಹಾ FOC ಸಂಖ್ಯೆ ಮತ್ತು ದಿನಾಂಕ ಕಾಣುತ್ತಿಲ್ಲ ಎಂದರೆ ಸರಿ. ಯಾವುದಾದರೂ ಪ್ರಕರಣದಲ್ಲಿ ವಸ್ತುಗಳನ್ನು ವಶಕ್ಕೆ ಪಡೆಯುವಾಗ ಆ ಬಗ್ಗೆ ಫೋಟೋ ತೆಗೆದು ಅವುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆ ಎಂದರೆ ಸರಿ. ಪ್ರಕರಣದ ಸಂಬಂಧ ವಶಕ್ಕೆಪಡೆದ ಎಲ್ಲಾ ವಸ್ತುಗಳನ್ನು ಹಾಜರುಪಡಿಸಿದ್ದು ನಾನು ಈ ದಿನ ಅವುಗಳನ್ನು ನೋಡಿ ಗುರುತಿಸಿರುತ್ತೇನೆ.

ನ್ಯಾಯಾಲಯದ ಮುಂದೆ ಎರಡು ಕತ್ತಿಗಳು ಕಾಣುತ್ತಿಲ್ಲ ಎಂದರೆ ಸರಿ. ನಿಪಿ-12 ರಲ್ಲಿ ಎರಡು ಕತ್ತಿಗಳು ಕಾಣುತ್ತಿದೆ ಎಂದರೆ ಸಾಕ್ಷಿಯು ಕೇವಲ ಒಂದು ಕತ್ತಿ ಕಾಣುತ್ತಿದೆ ಎಂದು ನುಡಿಯುತ್ತಾರೆ. ಈಗ ನೋಡುತ್ತಿರುವ ಎಂ.ಓ.3 ರ ಮೇಲೆ ಇರುವ ಕ್ರ.ಸಂ.4. ಈಗ ನೋಡುತ್ತಿರುವ ಎಂ.ಓ.4 ರ ಮೇಲಿನ ಕ್ರ.ಸಂ.5 ಆಗಿದ್ದು ಅದರ ಮೇಲೆ ಕೆಂಪು ಬಣ್ಣದ ಬರವಣಿಗೆ ಕೇವಲ ಒಂದು ಗೀಟು ಆಗಿದೆ. ನಿಪಿ-8 ರಲ್ಲಿ ಕಾಣುವ ಕ್ರ.ಸಂ.ಗಳನ್ನು ಛಾಯಾಚಿತ್ರದ ಮೇಲೆ ಬರೆಯಾಲಗಿದೆ. ಆ ಬರವಣಿಗೆಯನ್ನು ಕಚೇರಿಯಲ್ಲಿ ಬರೆಯಲಾಗಿದೆ. ಆ ರೀತಿ ಯಾವ ದಿನಾಂಕದಂದು ಬರೆಯಲಾಗಿದೆ ಎಂದು ನಿಪಿ-8 ರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆ ಕ್ರ.ಸಂ.ಗಳನ್ನು ಬರೆಯುವಾಗ ನಾನು ಅಲ್ಲಿಯೇ ಇದ್ದು ಅದನ್ನು ಚಾಸಾ-10 ರವರು ಬರೆದಿದ್ದಾರೆ. ಈ ಸಂಬಂಧ ಮಹಜರ್ ಬರೆದಿಲ್ಲ. ನಿಪಿ-8 ರಲ್ಲಿ ಕಾಣುವ ಎಂ.ಓ.1 ರ ಮೇಲೆ FOC ಸಂಖ್ಯೆ ಕಾಣುತ್ತಿದೆ. ಎಂ.ಓ.5 ಬಹಳ ಹಳೇಯದ್ದು ಹಾಗೂ ಹಿಂಭಾಗದಲ್ಲಿ ಗೆದ್ದಲು ತಿಂದಿದೆ ಎಂದರೆ ಸರಿ. ಕೋವಿಯ ಬಗ್ಗೆ ಮಹಜರ್ ಗಳಲ್ಲಿ ನಮೂದಿಸಿಲ್ಲ.

ಯಾವುದೇ ತೋಟಗಳನ್ನು ಉಪಯೋಗಿಸಲು ಕೋವಿ ಬೇಕು ಎಂದರೆ ಸರಿ. ಯಾವ ಬಣ್ಣದ ತೋಟಗಳನ್ನು (ಕಾಟ್ರಿಡ್ಜ್) ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮಹಜರ್ ನಲ್ಲಿ ನಮೂದಿಸಿಲ್ಲ. ತೋಟಗಳ ಪೈಕಿ ಹೊಸದು ಹಾಗೂ ಹಳೇಯ ತೋಟಗಳು ಎಷ್ಟಿದ್ದವು ಎಂದು ಬರೆದಿಲ್ಲ. ಎಂ.ಓ.6 ರ ಪೈಕಿ

4 ಹೊಸದಾದ ತೋಟಗಳು ಇವೆ ಎಂದರೆ ಸರಿ. ಎಂ.ಒ.6 ರ ಮೇಲೆ ಅವುಗಳ ಕಂಪೆನಿ ಮತ್ತು ಬೋರ್ ನ ಸಂಬಂಧದ ಮಾಹಿತಿ ಇತ್ತು ಎಂದರೆ ಸರಿ. ಅವುಗಳನ್ನು ಮಹಜರ್ ನಲ್ಲಿ ನಮೂದು ಮಾಡಿಲ್ಲ. ಎಂ.ಒ.6 ರ ಮೇಲೆ FOC ಸಂಖ್ಯೆ ಹಾಗೂ ದಿನಾಂಕ ನಮೂದಿಸಿಲ್ಲ. ನಾನು ವಶಕ್ಕೆ ಪಡೆದ ತೋಟಗಳ ಪೈಕಿ ಪ್ಲಾಸ್ಟಿಕ್ ಹಾಗೂ ಪೇಪರ್ ತೋಟಗಳು ಇದ್ದು ಎಷ್ಟು ಸಂಖ್ಯೆಗಳು ಎಂದು ನೆನಪಿಲ್ಲ. ಈ ಬಗ್ಗೆ ಮಹಜರ್ ನಲ್ಲಿ ಬರೆದಿಲ್ಲ. ತೋಟಗಳ ಸಂಪೂರ್ಣ ವಿವರವನ್ನು ಮಹಜರ್ ನಲ್ಲಿ ಬರೆಯಲು ಯಾವುದೇ ತೊಂದರೆ ಇರಲಿಲ್ಲ. ತೋಟಗಳಿಗೆ 6 ಅಥವಾ 7 ಎಂದು ಕ್ರ.ಸಂ. ಕೊಟ್ಟಿರಬಹುದು ಆದರೆ ನಿಖರವಾಗಿ ಗೊತ್ತಿಲ್ಲ. ಎಂ.ಒ.6 ರ ಮೇಲೆ ಮತ್ತು ಅವುಗಳು ಇರುವ ಕವರ್ ನ ಮೇಲೆ ಕ್ರ.ಸಂ. ಗಳು ಇಲ್ಲ ಎಂದರೆ ಸರಿ. ಕವರ್ ನ ಮೇಲೆ ಇರುವ ಕ್ರ.ಸಂ. 6 ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಒಂದುವೇಳೆ ನಾನು ಕ್ರ.ಸಂ. ಕೊಟ್ಟಿದ್ದರೆ ಅವು ಅಳಿಸಿ ಹೋಗುತ್ತಿರಲಿಲ್ಲ ಎಂದರೆ ಸರಿ.

ಎಂ.ಒ.1 ರಿಂದ 5 ತುಂಬಾ ಹಳೇಯದ್ದಾದ ಕೊಂಬುಗಳು ಎಂದರೆ ಸರಿ. ಎಂ.ಒ.2 ಗೆದ್ದಲು ತಿಂದಿದೆ ಎಂದರೆ ಸರಿ. ಕಿತ್ತೆಲೆಗಂಡಿ ಬಸ್ ಸ್ಟಾಂಡ್ ಜನನೀಬೀಡ ಸ್ಥಳದಲ್ಲಿ ಇದೆ ಎಂದರೆ ಸರಿ. ಆ ಸ್ಥಳದಲ್ಲಿ ಸ್ವತಂತ್ರ ಪಂಚರುದಾರರಿಗೆ ಮನವಿ ಮಾಡಲು ಪ್ರಯತ್ನಿಸಿಲ್ಲ. ಬಸ್ ಸ್ಟ್ಯಾಂಡ್ ಮೂರು ದಿಕ್ಕುಗಳಿಗೂ ದಾರಿ ಇದ್ದು, ದಕ್ಷಿಣಕ್ಕೆ ತೋಟ ಇದೆ. ನಿಪಿ-10 ಮತ್ತು 11 ನ್ನು ಕಚೇರಿಯಲ್ಲಿ ತೆಗೆಯಲಾಗಿದೆ. ನಿಪಿ-9 ನ್ನು ಚಿಕ್ಕಮಗಳೂರು RFO ಕಚೇರಿಯಲ್ಲಿ ತೆಗೆಯಲಾಗಿದೆ. ಆ ಫೋಟೋ ತೆಗೆದ ದಿನಾಂಕ ಗೊತ್ತಿಲ್ಲ. ಆದರೆ ನಿಪಿ-10 ಮತ್ತು 11 ನ್ನು ದಿ.18.02.2019 ರಂದು ತೆಗೆಯಲಾಗಿದೆ. ನಿಪಿ-9 ರ ಫೋಟೋ ತೆಗೆಯುವಾಗ ನಾನು ಇರಲಿಲ್ಲ. ಫೋಟೋಗಳನ್ನು ಯಾರು ತೆಗೆದಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ಆನೆಗಳು ಬೆಳೆ ನಾಶ ಮಾಡಿರುವ ಬಗ್ಗೆ ಗೋಣೀಬೀಡು ಹೋಬಳಿಯ ಜನಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದರು ಎಂದರೆ ಸರಿ. ಗೋಣೀಬೀಡು ಹೋಬಳಿಯಲ್ಲಿ ರೈತರು ಮತ್ತು ಕೂಲಿ ಕಾರ್ಮಿಕರನ್ನು ಆನೆ ತುಳಿದು ಸಾಯಿಸಿತ್ತು ಎಂದರೆ ಸರಿ. ಈ ಸಂಬಂಧ ಗ್ರಾಮಸ್ಥರು ಮುಷ್ಕರ ಮಾಡಿದ್ದರು ಎಂದರೆ ಸರಿ. ಆ ಎಲ್ಲಾ ಸಮಯದಲ್ಲೂ 1 ರಿಂದ 4 ನೇ ಆರೋಪಿತರು ಇಲಾಖೆಯ ವಿರುದ್ದ ಮುಂದಾಳತ್ವ ವಹಿಸಿಕೊಳ್ಳುತ್ತಿದದರು ಎಂದರೆ ಸರಿಯಲ್ಲ. ಈ ಕಾರಣ ಆರೋಪಿತರ ಮೇಲೆ ನಮ್ಮ ಇಲಾಖೆಯವರಿಗೆ ದ್ವೇಷ ಇತ್ತು ಎಂದರೆ ಸರಿಯಲ್ಲ.

ವಿವಿಧ ಕಾರಣಗಳಿಂದ ಕಚೇರಿಗೆ ತರುವ ವಸ್ತುಗಳನ್ನು ಬಳಸಿ ಆರೋಪಿತರ ವಿರುದ್ಧ ಬಳಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಈ ಕಾರಣ ಸ್ವತಂತ್ರ ಪಂಚರುದಾರರ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಗುರುತಿಸಿರುವ ಎಲ್ಲಾ ದಾಖಲೆಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.